ಸೆಲೆಬ್ರಿಟಿ

# ಸರ್ವಾಧಿಕಾರಿಯನ್ನೇ ಕೆಣಕಿದ ಕ್ರೀಡಾಸಾಧಕಿ!



■ ಪ್ರವೀಣ ಕುಲಕರ್ಣಿ

'ಮೊದಲು ಭಯಪಡುವುದನ್ನು ನಿಲ್ಲಿಸಿ, ಪ್ರಭುತ್ವದ ವಿರುದ್ಧ ಮಾತನಾಡಿ' – ಇದು ಬೆಲಾರಸ್‌ನ ಅಥ್ಲೀಟ್ ಕ್ರಿಸ್ಟಿನಾ ಸಿಮನೌಸ್ಕಯಾ ತನ್ನ ದೇಶದ ಪ್ರಜೆಗಳಿಗೆ ನಿರ್ಭೀತಿಯಿಂದ ನೀಡಿದ ಕರೆ. ಈ ಒಲಿಂಪಿಕ್ ಓಟಗಾರ್ತಿ ಹಾಗೆ ಕರೆ ನೀಡಿರುವುದು ಯಾರ ವಿರುದ್ಧ ಗೊತ್ತೆ? ನಿರಂಕುಶ ಅಧಿಕಾರಕ್ಕೆ ಹೆಸರಾದ ಬೆಲಾರಸ್‌ನ ರಾಷ್ಟ್ರಾಧ್ಯಕ್ಷ ಅಲೆಕ್ಸಾಂಡರ್ ಲುಕಶೆಂಕೊ ಅವರ ವಿರುದ್ಧ! ಬೆಲಾರಸ್‌ನ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಒಂದು ವರ್ಷ ಪೂರ್ಣಗೊಂಡ ಸಂದರ್ಭದಲ್ಲೇ ಈ ರೀತಿ ಧ್ವನಿ ಎತ್ತಿರುವ ಕ್ರಿಸ್ಟಿನಾ, 'ತನ್ನ ದೇಶದ ಪ್ರಜೆಗಳಿಗೇ ಬೆಲಾರಸ್ ಈಗ ಸುರಕ್ಷಿತ ತಾಣವಲ್ಲ' ಎಂದೂ ಹೇಳಿದ್ದಾರೆ.

ವೇಗದ ಓಟಕ್ಕೆ ಹೆಸರಾದ ಈ 24ರ ಹರೆಯದ ಯುವತಿ, ಒಲಿಂಪಿಕ್ ಕೂಟದ ಮಹಿಳೆಯರ ವಿಭಾಗದ 100 ಮೀಟರ್ ಹಾಗೂ 200 ಮೀಟರ್ ಓಟದ ಸ್ಪರ್ಧೆಯಲ್ಲಿ ಬೆಲಾರಸ್ ದೇಶವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಳು. 100 ಮೀಟರ್ ಓಟದ ಪ್ರಾಥಮಿಕ ಸುತ್ತಿನಲ್ಲಿ ನಾಲ್ಕನೇ ಸ್ಥಾನ ಗಳಿಸಿ, ಹೊರಬಿದ್ದಿದ್ದಳು. ತನ್ನ ಗಮನಕ್ಕೆ ತರದೆ ತನ್ನ ಹೆಸರನ್ನು 4X400 ಮೀಟರ್ ರಿಲೆಯಲ್ಲಿ ಸೇರ್ಪಡೆ ಮಾಡಿದ್ದು, ಕ್ರಿಸ್ಟಿನಾಳನ್ನು ರೊಚ್ಚಿಗೇಳುವಂತೆ ಮಾಡಿತ್ತು. ಏಕೆಂದರೆ, ಮಧ್ಯಮ ದೂರದ ಓಟದಲ್ಲಿ ಅವಳು ಈ ಹಿಂದೆ ಪಾಲ್ಗೊಂಡವಳಲ್ಲ.

ಬೆಲಾರಸ್ ಒಲಿಂಪಿಕ್ ಸಮಿತಿಯ ಈ ನಡೆಯ ವಿರುದ್ಧ ಆಕೆ ಧ್ವನಿ ಎತ್ತುವುದೇ ತಡ, ಅವಳನ್ನು ಬಲವಂತದಿಂದ ತವರಿಗೆ ವಾಪಸ್ ಕಳಿಸುವ ಪ್ರಯತ್ನಗಳು ನಡೆದಿದ್ದವು. ವಿಮಾನ ನಿಲ್ದಾಣಕ್ಕೂ ಅವಳನ್ನು ಕರೆದೊಯ್ಯಲಾಗಿತ್ತು. ಆದರೆ, ಜಪಾನ್ ಪೊಲೀಸರು ಆಕೆಗೆ ರಕ್ಷಣೆ ಒದಗಿಸಿದ್ದರು. ಅವಳ ಇಚ್ಛೆಗೆ ವಿರುದ್ಧವಾಗಿ ಅವಳನ್ನು ತವರಿಗಟ್ಟುವ ಬೆಲಾರಸ್‌ನ ಅಧಿಕಾರಿಗಳ ಪ್ರಯತ್ನಕ್ಕೂ ತಡೆಯೊಡ್ಡಿದ್ದರು. ತವರಿನಲ್ಲಿ ತನಗೆ ಜೀವ ಭಯವಿದೆ ಎಂದು ಆಕೆ ಹೇಳಿದ್ದರಿಂದ ಮಾನವೀಯ ನೆಲೆಯಲ್ಲಿ ಪೋಲೆಂಡ್ ಈಗ ಅವಳಿಗೆ ಆಶ್ರಯ ನೀಡಿದೆ. ಟೋಕಿಯೊದಿಂದ ಅವಳು ಸೀದಾ ಪೋಲೆಂಡ್‌ನ ವಾರ್ಸಾಕ್ಕೆ ಬಂದಿಳಿದಿದ್ದಾಳೆ. ತನ್ನ ದೇಶದ ಪರವಾಗಿ ಸ್ಪರ್ಧಿಸಲು ಪೋಲೆಂಡ್ ಅವಳಿಗೆ ಅವಕಾಶವನ್ನೂ ನೀಡಿದೆ.

ಒಲಿಂಪಿಕ್ ಕೂಟದ ಪೂರ್ವದಲ್ಲಿ ಹತ್ತು ಹಲವು ಪದಕಗಳನ್ನು ಗೆದ್ದು ತಂದಿರುವ ಈ ಕ್ರೀಡಾ ಸಾಧಕಿ, ಈಗ ದಮನಿತರ ಧ್ವನಿಯಾಗಿ ನಿಂತಿದ್ದಾಳೆ. 'ನನ್ನ ದೇಶ ಮತ್ತೆ ಸ್ವಾತಂತ್ರ್ಯದಿಂದ ಉಸಿರಾಡಬೇಕು. ನನ್ನ ಜನರಿಗೆ ವಾಕ್ ಸ್ವಾತಂತ್ರ್ಯ ಮರಳಬೇಕು. ಎಲ್ಲರೂ ಸಹಜ ಜೀವನ ನಡೆಸುವಂತಾಗಬೇಕು. ಭಯದಿಂದ ಮುಕ್ತರಾಗಿ ಅವರು ಬದುಕಬೇಕು. ಇದೇ ನನ್ನ ಅಭಿಲಾಷೆ' ಎಂದು ಆಕೆ ಹೇಳುತ್ತಾಳೆ.

'ಬೆಲಾರಸ್‌ನಲ್ಲಿ ಈಗ ಪ್ರತಿಭಟನೆ ನಡೆಸಲು ಯಾರಿಗೂ ಧೈರ್ಯವಿಲ್ಲ. ಏಕೆಂದರೆ, ಏಟು ತಿನ್ನಬೇಕಾದ, ಜೈಲು ಪಾಲಾಗಬೇಕಾದ ಭೀತಿ ಅವರಿಗೆ. ಇದಕ್ಕೆಲ್ಲ ದೇಶದಲ್ಲಿ ಈಗ ಅಧಿಕಾರ ನಡೆಸುವವರೇ ಕಾರಣ' ಎಂದು ಕ್ರಿಸ್ಟಿನಾ ಪ್ರಭುತ್ವದ ವಿರುದ್ಧ, ಅದರಲ್ಲೂ ಲುಕಶೆಂಕೊ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಾಳೆ. 'ನನಗೂ ದೇಶಕ್ಕೆ ಮರಳುವ ಆಸೆ ಇದೆ. ಆದರೆ, ಅಲ್ಲಿ ಮೊದಲು ಸುರಕ್ಷಿತ ಹಾಗೂ ಮುಕ್ತ ವಾತಾವರಣ ನೆಲೆಗೊಳ್ಳಬೇಕು' ಎಂದೆನ್ನುವ ಈ ಸಾಧಕಿ, ಅದೇ ಉಸಿರಿನಲ್ಲಿ 'ಲುಕಶೆಂಕೊ ಆಡಳಿತ ಕೊನೆಗೊಂಡರಷ್ಟೇ ದೇಶದಲ್ಲಿ ಮುಕ್ತ ವಾತಾವರಣ ನೆಲೆಗೊಳ್ಳಲು ಸಾಧ್ಯ' ಎನ್ನುತ್ತಾಳೆ.

ಜಪಾನ್‌ನಲ್ಲಿ ಪೊಲೀಸರ ರಕ್ಷಣೆಯಲ್ಲಿದ್ದಾಗ ಕ್ರಿಸ್ಟಿನಾ, ತನ್ನ ಅಜ್ಜಿಗೆ ಫೋನ್ ಮಾಡಿದ್ದಳು. ಯಾವುದೇ ಕಾರಣಕ್ಕೂ ಬೆಲಾರಸ್‌ಗೆ ಮರಳಬೇಡ. ಬೇರೆ ಯಾವುದೇ ದೇಶದಲ್ಲಿ ಆಶ್ರಯ ಪಡೆಯಲು ಪ್ರಯತ್ನಿಸು ಎಂದು ಅವಳಜ್ಜಿ ಸಲಹೆ ನೀಡಿದ್ದಳು. ತಾನು ಬೆಲಾರಸ್‌ಗೆ ಮರಳಿದರೆ ಮನೋರೋಗಿಗಳ ಆಸ್ಪತ್ರೆಯಲ್ಲಿ ರೋಗಿಯಂತೆ ಬೀಳಬೇಕು ಅಥವಾ ಜೈಲು ಪಾಲಾಗಬೇಕು ಎನ್ನುವ ಸೂಚನೆ ಸಿಗುತ್ತಿದ್ದಂತೆ ಕ್ರಿಸ್ಟಿನಾ ಪೋಲೆಂಡ್‌ನತ್ತ ಚಿತ್ತ ಹರಿಸಿದಳು. ಕ್ರಿಸ್ಟಿನಾ ವಿರುದ್ಧ ಹರಿಹಾಯ್ದಿರುವ ಲುಕಶೆಂಕೊ, ಅವಳೀಗ ಪೋಲೆಂಡ್ ಸರ್ಕಾರದ ಕೈಗೊಂಬೆಯಾಗಿದ್ದಾಳೆ ಎಂದು ಕುಟುಕಿದ್ದಾರೆ.

'ಈಗ ನಡೆದಿರುವುದಕ್ಕೆ ನನಗೆ ಯಾವುದೇ ಖೇದವಿಲ್ಲ. ಇಷ್ಟಕ್ಕೂ ನಾನು ಮಾಡಿದ್ದಾದರೂ ಏನು? ಸತ್ಯವನ್ನು ಜಗತ್ತಿನ ಮುಂದೆ ತೆರೆದಿಟ್ಟಿದ್ದೇನೆ. ಇದುವರೆಗಿನ ಕ್ರೀಡಾ ಜೀವನ ನನ್ನಲ್ಲಿ ಸತ್ಯವನ್ನು ನಿರ್ಭೀತಿಯಿಂದ ಹೇಳುವ ಶಕ್ತಿಯನ್ನು ತುಂಬಿದೆ' ಎಂದು ಹೇಳುತ್ತಾಳೆ ಕ್ರಿಸ್ಟಿನಾ. ಬೆಲಾರಸ್‌ನ ನಿರಂಕುಶ ಆಡಳಿತದ ವಿರುದ್ಧ ಧ್ವನಿ ಎತ್ತಿರುವುದಕ್ಕೆ ಈಗಾಗಲೇ ಏಳು ಅಥ್ಲೀಟ್‌ಗಳನ್ನು ಅಲ್ಲಿನ ಸರ್ಕಾರ ಜೈಲಿಗಟ್ಟಿದೆ. 36 ಅಥ್ಲೀಟ್‌ಗಳನ್ನು ರಾಷ್ಟ್ರೀಯ ತಂಡದಿಂದ ಅಮಾನತುಗೊಳಿಸಿದೆ.

ಯುರೋಪಿಯನ್ ಅಥ್ಲೆಟಿಕ್ಸ್ ಕೂಟದಲ್ಲಿ ಬೆಳ್ಳಿ ಪದಕ ಜಯಿಸಿದ್ದ ಕ್ರಿಸ್ಟಿನಾ, ಈಗ ಆ ಪದಕವನ್ನು ಹರಾಜಿಗೆ ಇಟ್ಟಿದ್ದಾಳೆ. ಬಂದ ಹಣವನ್ನು ತೊಂದರೆಯಲ್ಲಿರುವ ಇತರ ಅಥ್ಲೀಟ್‌ಗಳ ನೆರವಿಗೆ ಬಳಸಲು ನಿರ್ಧರಿಸಿದ್ದಾಳೆ. 'ನಿನ್ನ ಕ್ರೀಡಾ ಭವಿಷ್ಯ ಹೇಗೆ ಕಣಮ್ಮ' ಎಂದು ಪ್ರಶ್ನಿಸಿದರೆ, ಪೋಲೆಂಡ್ ಪರವಾಗಿ ಸ್ಪರ್ಧಿಸುವೆ. ಆದರೆ, ನನ್ನ ಕ್ರೀಡಾ ಜೀವನಕ್ಕಿಂತ ನನಗೀಗ ನನ್ನ ದೇಶದ ಭವಿಷ್ಯ ಎಲ್ಲಕ್ಕಿಂತ ಮುಖ್ಯ' ಎಂದು ಆಕೆ ಹೇಳುತ್ತಾಳೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65